conjested. I appeal to this House to immediately stop the work on the railway track, which connects Lingarajapuram, Venkateshpuram. May be K.R.Puram can be used as a junction and the trains diverted that way, to reduce pressure on this area-six level crossing. Can you imagine what is happening. I appeal to you to help us in this matter.

ಶ್ರೀ ಬಿ.ಎನ್.ಬಚ್ಚೇಗೌಡ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರುಗಳಾದ ಶ್ರೀ ಶಿವರಾಜುರವರು ಮತ್ತು ಶ್ರೀ ರಾಜಣ್ಣನವರು ಈ ಬಗ್ಗೆ ಪ್ರಸ್ತಾಪ ಮಾಡಿದ್ದು ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಮಾನ್ಯ ಫರ್ನಾಂಡಿಸ್ ಅವರು ತಿಳಿಸಿದ ಹಾಗೆ ಇದು ರೈಲ್ವೆಗೆ ಸಂಬಂಧಪಟ್ಟ ವಿಚಾರ. ರೈಲ್ವೆ ಪ್ರಾಪರ್ಟಿ ಮೇಲೆ ಲೈನ್ಸ್ ಮತ್ತು ಬೇರೆ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೋಸ್ಕರ ರೈಲ್ವೆ ಇಲಾಖೆಯ ಜನರಲ್ ಮ್ಯಾನೇಜರ್‌ರವರು, ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಮತ್ತು ಕರ್ನಾಟಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನ ಅಧಿಕಾರಿಗಳು ಹೀಗೆ ಎಲ್ಲರೂ ಸೇರಿ ಕುಳಿತು ಇಲ್ಲಿಯ ಶಾಸಕರ ಜೊತೆ ಚರ್ಚೆ ಮಾಡಿ ಆ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳುವಂಥ ಒಂದು ವ್ಯವಸ್ಥೆ ಮಾಡುತ್ತೇವೆ.

SRI J.A.FERNANDEZ : Unless you have over-bridges and subways it is not going to work.

ಶ್ರೀ ಬಿ.ಎನ್.ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, Railways will take up this overbridges. ರೈಲ್ವೆ ಓವರ್‌ಬ್ರಿಡ್ಜಸ್ ರೈಲ್ವೆ ಲೈನ್ಸ್ ಅವೆಲ್ಲಾ ರೈಲ್ವೆ ಇಲಾಖೆಯವರಿಗೆ ಬರುತ್ತದೆ. ಬೆಂಗಳೂರಿನಲ್ಲಿ ಬಾಣಸವಾಡಿ ಹತ್ತಿರ ಮಾಡುತ್ತಿರುವುದು, ಕೆ.ಆರ್.ಪುರಂ ಹತ್ತಿರ ಮಾಡುತ್ತಿರುವುದು ಬೇರೆ ಜಂಕ್ಷನ್ಸ್ ಮುಂತಾದ ವ್ಯವಸ್ಥೆಯನ್ನೆಲ್ಲ General Manager Railways should come and talk. We will have a meeting with him and decide.

SRI J.A.FERNANDEZ : Railways will not adjudicate on the health of the people of the area.

(ಠ) ಬೀದರ್ ಜಿಲ್ಲೆಯಲ್ಲಿರುವ ರೈತರ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಕಡಿತ

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇವತ್ತು ಅಧಿವೇಶನ ನಡೆಯುವ ಕೊನೆಯ ದಿವಸ. ಈಗಾಗಲೇ ಸಾಕಷ್ಟು ಸದಸ್ಯರು ಅವರವರ ಮನೆಗೆ ಹೋಗಲಿಕ್ಕೆ ಆತುರದಲ್ಲಿದ್ದಾರೆ. ಇವತ್ತು ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಇರಬೇಕಾಗಿತ್ತು. ನಾನು ರೂಢಿಯಲ್ಲಿಯ ಪದ್ಧತಿಯನ್ನು ಹೇಳುತ್ತಿದ್ದೇನೆ. ಯಾವಾಗಲೂ ಕೊನೇ ದಿವಸದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಇದ್ದು ಸೌಹಾರ್ದತೆಯ ಮಾತುಗಳನ್ನಾಡಬೇಕಿತ್ತು. ಏಕೆಂದರೆ ಅವರಿಗೂ ಅಧ್ಯಕ್ಷರು ಸಹಕರಿಸಿರುತ್ತಾರೆ. ವಿರೋಧ ಪಕ್ಷದವರು ಸಹ ಸಹಕರಿಸಿರುತ್ತಾರೆ ಮತ್ತು ಆಡಳಿತಪಕ್ಷದ ಸಹಕಾರ ಕೂಡ ನಮಗೆ ಬೇಕಾಗಿರುತ್ತದೆ, ಆ ದೃಷ್ಟಿಯಿಂದ ಅನೇಕ ಸಾರಿ ಸೌಹಾರ್ದತೆಯ ಮಾತುಗಳು ಇಲ್ಲಿ ನಡೆಯುತ್ತಿರುತ್ತವೆ ಅದಕ್ಕೋಸ್ಕರ ಅವರು ಇರಬೇಕಾಗಿತ್ತು.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ನಾವು ಇದ್ದೇವಲ್ಲಾ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಇದ್ದರೂ ಅಥವಾ ಇಲ್ಲದಿದ್ದರೂ ಏನೂ ವ್ಯತ್ಯಾಸ ಆಗುವುದಿಲ್ಲ. ಇನ್ನು ವಿಷಯಕ್ಕೆ ಬರುವುದಾದರೆ, ನಾನು ಬೀದರ್ ಜಿಲ್ಲೆಯ ಹುಮ್ನಾಬಾದ್, ಬೀದರ್ ಮತ್ತು ಬಸವಕಲ್ಯಾಣಕ್ಕೆ ಹೋಗಿದ್ದಾಗ ಪಂಪ್‌ಸೆಟ್ಟುಗಳನ್ನು ಇಟ್ಟುಕೊಂಡಿರುವಂಥ ನೂರಾರು ರೈತರು ಬಂದು ರೈತರ ಪಂಪ್‌ಸೆಟ್ಟುಗಳಿಗೆ ಪವರ್ ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ, ಏಕೆಂದರೆ ಹಿಂದಿನ ಬಾಕಿಯನ್ನು ಕೊಡುವುದಕ್ಕೆ 31ನೇ ತಾರೀಖು ಕೊನೆಯ ದಿನಸ ಎಂದು ಗಡುವು ಕೊಟ್ಟಿದ್ದಾರೆಂದು ಅವರು ಹೇಳಿದರು. ಆ ರೈತರು ಏನು ಕೇಳುತ್ತಿದ್ದಾರೆಂದರೆ - ಅನೇಕ ಕಡೆ ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬನ್ನು ತೆಗೆದುಕೊಳ್ಳುತ್ತಿಲ್ಲ, ಅದಕ್ಕಾಗಿ ಸರ್ಕಾರದ ಬಾಕಿಯನ್ನು ತಕ್ಷಣ ನಮ್ಮಿಂದ ಕೊಡುವುದಕ್ಕೆ ಆಗುತ್ತಿಲ್ಲ, ಸದಸ್ಯಕ್ಕೆ ಹಣದ ತೊಂದರೆ ಇರುವುದರಿಂದ ಸ್ವಲ್ಪ ಟೈಮ್ ಕೊಟ್ಟರೆ ನಾವು ಸರ್ಕಾರಕ್ಕೆ ಬಾಕಿ ಪಾವತಿ ಮಾಡುತ್ತೇವೆ ಎಂದು ಹೇಳಿದರು. ಮತ್ತು ತಾವು ಇದಕ್ಕೆ ಸ್ವಲ್ಪ ಸಹಾಯ ಮಾಡಿರಿ, ಸದನದಲ್ಲಿ ಪ್ರಸ್ತಾಪ ಮಾಡಿರಿ ಎಂದು ಬಹಳ ಜನ ಬಂದು ಕೇಳಿಕೊಂಡರು. ಈ ಪರಿಸ್ಥಿತಿ ಇಂಥ ಒಂದೇ ಕಡೆ ಅಲ್ಲ. ಇದು ಕೋಲಾರ ಮತ್ತು ಬೇರೆ ಬೇರೆ ಕಡೆ ಯಾರು ಬಡವರು ಪಂಪ್‌ಸೆಟ್ಟುಗಳನ್ನು ಇಟ್ಟುಕೊಂಡಿದ್ದಾರೆ ಅವರಿಗೆ ಬಾಕಿ ಪಾವತಿ ಮಾಡತಕ್ಕಂಥ ಶಕ್ತಿ ಇಲ್ಲ ಅಥವಾ ಅವರಿಗೆ ಏಕಕಾಲದಲ್ಲಿ ಹಣವನ್ನು ಪಾವತಿ ಮಾಡುವಂಥ ಶಕ್ತಿ ಇಲ್ಲ ಅಂಥವರಿಗೆ ಸ್ವಲ್ಪ ತೊಂದರೆಯಾಗುತ್ತದೆ. ದಯಮಾಡಿ 2-3 ತಿಂಗಳಾದರೂ ಇದನ್ನು ಎಕ್ಸ್‌ಟೆಂಡ್ ಮಾಡಿ, ಇನ್‌ಸ್ಟಾಲ್‌ಮೆಂಟ್ ಬೇಸಿಸ್ ಮೇಲೆ ರೈತರಿಂದ ಬಾಕಿ ಹಣವನ್ನು ಕಲೆಕ್ಟ್ ಮಾಡಿಕೊಂಡು, ಪವರ್ ಡಿಸ್‌ಕನೆಕ್ಟ್ ಮಾಡದಿರುವ ರೀತಿಯಲ್ಲಿ ಆ ರೈತರಿಗೆ ಸಹಾಯ ಮಾಡಿದರೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇನ್ನು ಎರಡನೆಯ ವಿಷಯವನ್ನು ಶೂನ್ಯ ವೇಳೆಯಲ್ಲಿ ಕೇಳಬಾರದು. ಆದರೂ ಕೇಳುತ್ತೇನೆ. ಹೌಸಿಂಗ್ ಅಲಾಟ್‌ಮೆಂಟ್‌ನಲ್ಲಿ ಡಿಸ್ಕ್ರಿಮಿನೇಟ್ ಆಗಿದೆ ಎಂದು ನಾವು ಎಲ್ಲಾ ಸದಸ್ಯರು ಪ್ರಸ್ತಾಪ ಮಾಡಿದ್ದೆವು. ಈ ಸದನವನ್ನು ಅಡ್ಜರ್ನ್ ಮಾಡುವುದಕ್ಕಿಂತ ಮುಂಚೆ ಅದನ್ನು ಪ್ರಸ್ತಾಪ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಸರ್ಕಾರದ ಕಡೆಯಿಂದ ಸಂಬಂಧಪಟ್ಟವರು ಹೇಳಿದ್ದರು. ಪ್ರತಿಯೊಂದು ಮತಕ್ಷೇತ್ರಕ್ಕೂ ಎಷ್ಟೆಷ್ಟು ಮನೆಗಳನ್ನು ಕೊಡುತ್ತಾರೆ ಎನ್ನುವಂಥ ಮಾತು ಸರ್ಕಾರದ ಕಡೆಯಿಂದ ಇನ್ನೂ ಕೂಡ ಬಂದಿಲ್ಲ. ದಯಮಾಡಿ ಈ ಎರಡು ವಿಷಯದ ಬಗ್ಗೆ ಸರ್ಕಾರದ ಕಡೆಯಿಂದ ಉತ್ತರ ಬರಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಕೆ.ಇ.ಬಿ.ಗೆ ಸಂಬಂಧ ಪಟ್ಟ ಹಾಗೆ ಶ್ರೀ ಶರಣಬಸಪ್ಪ ದರ್ಶನಾಪುರ ಅವರು ಉತ್ತರ ಕೊಡುತ್ತಾರೆ. ಹೌಸಿಂಗ್‌ಗೆ ಸಂಬಂಧಪಟ್ಟ ಹಾಗೆ ನಾವು ಸಚಿವಸಂಪುಟದಲ್ಲಿ ಚರ್ಚೆ ಮಾಡಿದ್ದೇವೆ. ಈಗಾಗಲೇ ಈ ವರ್ಷದಲ್ಲಿ ಹೆಚ್ಚಿಗೆ ಮನೆಗಳನ್ನು ಕೊಡಬೇಕೆಂದು ತೀರ್ಮಾನವನ್ನು ಸಹಿತ ಮಾಡಿದ್ದೇವೆ. ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿರುವ ಹಾಗೆ ಯಾವ ಯಾವ ಕ್ಷೇತ್ರಗಳಲ್ಲಿ ಕಡಿಮೆ ಮನೆಗಳನ್ನು ಕೊಟ್ಟಿದ್ದಾರೆ ಅದನ್ನು ಸರಿಮಾಡತಕ್ಕಂಥ, ಬ್ಯಾಲೆನ್ಸಿಂಗ್ ಮಾಡತಕ್ಕಂಥ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಲಿಕ್ಕೆ ಸಚಿವಸಂಪುಟ ತೀರ್ಮಾನ ಮಾಡಿದೆ, ಎಂದು ನಾನು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆ ಅವರು ಪಂಪ್‌ಸೆಟ್ಟುಗಳಿಗೆ ಪವರ್ ಡಿಸ್‌ಕನೆಕ್ಷನ್ ವಿಚಾರವಾಗಿ ಹೇಳಿದರು, ನಾನು ಕೂಡ ಚಿಂಚೋಳಿಯಲ್ಲಿನ ಒಂದು ಕಾರ್ಯಕ್ರಮಕ್ಕೆ ಹುಮನಾಬಾದ್ ಮೂಲಕ ಹೋಗುವಾಗ ಅಲ್ಲಿ ಶ್ರೀ ಮಿರಾಜುದ್ದೀನ್ ಎನ್ ಪಾಟೀಲ್ ಅವರು ಕೂಡ ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಹಳಿಯಾಳ ಮತ್ತು ರಾಯಚೂರಿನಲ್ಲಿ ಕೂಡ ಈ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಯಾವ ರೈತ ಬಹಳಷ್ಟು ಬಡವನಿದ್ದಾನೆ. ಯಾವ ರೈತ ಆ ಬೆಳೆ ಮೇಲೆಯೇ ಅವಲಂಬಿತನಾಗಿದ್ದಾನೆ ಅಂಥ ರೈತರಿಗೆ ನಾವು ಪವರ್‌ಕಟ್ ಮಾಡುತ್ತಿಲ್ಲ. ಮತ್ತು ಇನ್‌ಸ್ಟಾಲ್‌ಮೆಂಟ್ ಮುಖಾಂತರ ಬಾಕಿ ಹಣವನ್ನು ಕೊಟ್ಟರೆ ಅದನ್ನು ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಕೂಡ ಮಾಡಿದ್ದೇವೆ. ಇನ್‌ಸ್ಟಾಲ್‌ಮೆಂಟ್ ಮುಖಾಂತರ ಕೊಟ್ಟರೆ ಅದನ್ನು ಕಲೆಕ್ಟ್ ಮಾಡಿ ಎಂದು ಎಲ್ಲಾ ಕಡೆ ಹೇಳಿದ್ದೇವೆ. ಈಗ ಐದು ಸಾವಿರ ರೂಪಾಯಿ ಬಾಕಿ ಇದ್ದು ಅದರಲ್ಲಿ ಕನಿಷ್ಟ ಒಂದೆರಡು ಸಾವಿರ ರೂಪಾಯಿಗಳನ್ನಾದರೂ ತುಂಬತಕ್ಕಂಥ ಶಕ್ತಿ ಇರುವವರು ಖಂಡಿತ ಇನ್‌ಸ್ಟಾಲ್‌ಮೆಂಟ್ ಮುಖಾಂತರ ಕಟ್ಟಬಹುದು. ಬಹಳಷ್ಟು ಜನ ಬಾಕಿ ಪಾವತಿ ಮಾಡತಕ್ಕಂಥ ಶಕ್ತಿ ಇದ್ದವರೇ ಪಾವತಿ ಮಾಡುತ್ತಿಲ್ಲ. ಹೆಚ್ಚಿನಂಶ ಬಡವರು, ನಿರ್ಗತಿಕರು ಯಾರು ಇದ್ದಾರೆ ಅವರ ಪರಿಸ್ಥಿತಿಯನ್ನು ನೋಡಿದರೆ ಗೊತ್ತಾಗುತ್ತದೆ. ಅಂಥವರಿಗೆ ನಾವು ಫೋರ್ಸ್ ಮಾಡುತ್ತಿಲ್ಲ. ಅವರು ಎಷ್ಟು ಕೊಡುತ್ತಾರೆ ಅಷ್ಟನ್ನು ತೆಗೆದುಕೊಳ್ಳುತ್ತಿದ್ದೇವೆ. ಇನ್‌ಸ್ಟಾಲ್‌ಮೆಂಟ್ ವ್ಯವಸ್ಥೆಯನ್ನು ಕೂಡ ಮಾಡಿದ್ದೇವೆ. ಕೊನೆಯ ಪಕ್ಷ ಇನ್‌ಸ್ಟಾಲ್‌ಮೆಂಟ್ ಮುಖಾಂತರ ತುಂಬಿದರೆ ಕಟ್ ಮಾಡತಕ್ಕಂಥ ವ್ಯವಸ್ಥೆ ಕೂಡ ನಾವು ಮಾಡುವುದಿಲ್ಲವೆಂದು ತಮ್ಮ ಮುಖಾಂತರ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸ್ವವಿವೇಚನೆಯಿಂದ ತಾವು ಹೇಳತಕ್ಕಂಥದ್ದು ಸರಿ ಇದೆ. ಆದರೆ ಅಲ್ಲಿ ಅಧಿಕಾರಿಗಳು ಡಿಸ್ಕ್ರಿಷನ್ ಉಪಯೋಗ ಮಾಡುವಾಗ ಏನು ಮಾಡತ್ತಾರೆಂದರೆ, ಯಾರು ಹಣ ಕೊಡುತ್ತಾರೋ ಅವರಿಗೆ ಮಾತ್ರ ಸ್ವಲ್ಪ ಮುಂದಕ್ಕೆ ಹಾಕುವುದು, ಬಾಕಿಯವರಿಗೆ ಡಿಸ್‌ಕನೆಕ್ಟ್ ಮಾಡುವುದು ನಡೆಯುತ್ತಿದೆ. ಅಲ್ಲಿ ಇಂಡಸ್ಟ್ರಿಯಲಿಸ್ಟ್ ಅಥವಾ ದೊಡ್ಡ ರೈತ ಆಗಿದ್ದು ಅವನಿಗೆ ಅನುಕೂಲ ಇದ್ದು ಬಾಕಿ ಹಣವನ್ನು ಕೊಟ್ಟಿಲ್ಲವೆಂದರೆ ಅಂಥವನ ಪಂಪ್‌ಸೆಟ್ಟಿಗೆ ಪವರ್ ಡಿಸ್‌ಕನೆಕ್ಟ್ ಮಾಡಿ. ಬಡವರು ಯಾರು ಇದ್ದಾರೆ ಅವರು ಬಾಕಿ ಪಾವತಿ ಮಾಡುವುದಕ್ಕೆ 2 ತಿಂಗಳು ಅಥವಾ 3 ತಿಂಗಳ ಟೈಮ್ ಕೊಡುತ್ತೇವೆಂದು ಕೊನೆಯ ಪಕ್ಷ ಸ್ಪಿಕ್ಟ್ ಆಗಿ ಒಂದು ಇನ್‌ಸ್ಟ್ರಕ್ಷನ್ ಇಲ್ಲಿಂದ ಕೊಡಿ.

ಶ್ರೀ ಎನ್.ಎಂ. ನಬಿ (ಕೂಡ್ಲಿಗಿ) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಮಾತನಾಡುತ್ತೇನೆ. ನಮ್ಮ ಕ್ಷೇತ್ರದಲ್ಲೂ ಕೂಡ ಅದೇ ಪ್ರಾಬ್ಲಮ್ ಇದೆ. ಹಿಂದೆ ಹೆಚ್ಚಿನ ಮಳೆ ಬಂದು ಅಲ್ಲಿ ಬೆಳೆ ಬಹಳಷ್ಟು ಹಾಳಾಗಿದೆ. ಈಗ ಅಲ್ಲಿ ಲಿಫ್ಟ್ ಇರಿಗೇಷನ್ ಮುಖಾಂತರ ಕೆಲವರು ಬೆಳೆ ಬೆಳೆಯತಕ್ಕಂಥದ್ದು ಮಾಡುತ್ತಿದ್ದಾರೆ. ಇನ್ನು ಒಂದು ತಿಂಗಳ ಒಳಗೆ ಅಲ್ಲಿ ಬೆಳೆ ಬರತಕ್ಕಂಥದ್ದು ಇದೆ. ಕೊನೆಯ ಪಕ್ಷ ಇದಕ್ಕಾದರೂ ಟೈಮ್ ಎಕ್ಸ್‌ಟೆಂಡ್ ಮಾಡಿದರೆ ಬಾಕಿ ಇರುವಂಥ ಹಣವನ್ನು ಕಟ್ಟುತ್ತೇವೆ ಎನ್ನತಕ್ಕಂಥ ಮಾತನ್ನು ಅಲ್ಲಿಯ ರೈತರು ಹೇಳುತ್ತಿದ್ದಾರೆ. ಬೆಳೆ ಬಂದ ಮೇಲೆಯೇ ಅವರು ಕೊಡುವುದಕ್ಕೆ ಸಾಧ್ಯ. ಈಗ ಅವರಿಗೆ ಆಗಿರುವ ಅನಾಹುತವನ್ನೇ ಸರಿ ಮಾಡುವುದಕ್ಕೆ ಆಗಿಲ್ಲ. ದಯಮಾಡಿ ಎಕ್ಸ್‌ಟೆಂಡ್

ಮಾಡಿ ನಿರ್ದಿಷ್ಟ ದಿನಾಂಕವನ್ನು ಗುರುತು ಮಾಡಬೇಕು. ಅಲ್ಲಿಯ ಅಧಿಕಾರಿಗಳು ಬಡ ರೈತರಿಂದ ಕಲೆಕ್ಟ್ ಮಾಡಬಾರದು, ದೊಡ್ಡ ರೈತರಿಂದ ಕಲೆಕ್ಟ್ ಮಾಡಬೇಕು ಎಂದು ನೋಡುವುದಿಲ್ಲ, ಎಲ್ಲರಿಗೂ ಒಂದೇ ತರಹ ಮಾಡುತ್ತಾರೆ.

ಶ್ರೀ ಶರಣಬಸಪ್ಪ ದರ್ಶನಾಪುರ : ಮಾನ್ಯ ಅಧ್ಯಕ್ಷರೆ, ಬಾಕಿ ಹಣವನ್ನು ಕಲೆಕ್ಟ್ ಮಾಡುವ ಕೊನೆಯ ದಿನಾಂಕವನ್ನು ಎಕ್ಸ್‌ಟೆಂಡ್ ಮಾಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ.

9. ಪರಸ್ಪರ ಅಭಿನಂದನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರದ ಪರವಾಗಿ ಮತ್ತು ನಮ್ಮೆಲ್ಲರ ಪರವಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುವ ಸಲುವಾಗಿ ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಮೊದಲನೆಯಾಗಿ ಈ ಅಧಿವೇಶನ ಬಹಳ ಯಶಸ್ವಿಯಾಗಿ ನಡೆಯುವುದಕ್ಕೆ ಸರ್ಕಾರದ ತಪ್ಪು ಎಲ್ಲಿ ಇದೆ ಎನ್ನುವುದು ಎತ್ತಿ ಹಿಡಿಯುವುದಕ್ಕೆ ಇರಬಹುದು, ವಿರೋಧ ಪಕ್ಷದ ಸದಸ್ಯರ ವಿಚಾರಗಳಿಗೆ ಮಾನ್ಯತೆಯನ್ನು ಕೊಡತಕ್ಕಂಥ ವಿಚಾರ ಇರಬಹುದು, ಹೀಗೆ ಎಲ್ಲಾ ವಿಚಾರದಲ್ಲೂ ಸಹಿತ ಬಹಳ ಸಹಕಾರವನ್ನು ಕೊಟ್ಟು, ಮತ್ತು ಬಜೆಟ್ ಮಂಡನೆ ಮಾಡತಕ್ಕಂಥ ವಿಚಾರದಲ್ಲೂ ಕೂಡ ತಾವು ಯಶಸ್ವಿಯಾಗಿ ನಡೆಸಿಕೊಟ್ಟಿದ್ದೀರಿ. ಇದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನರ್ಪಿಸಲಿಕ್ಕೆ ಬಯಸುತ್ತೇನೆ. ಮತ್ತು ತಾವು ಕಳೆದ ನಾಲ್ಕೂವರೆ ವರ್ಷಗಳಿಂದ ಆ ಪೀಠದಲ್ಲಿ ಕುಳಿತು ಆ ಪೀಠದ ಗೌರವವನ್ನು ಹೆಚ್ಚಿಸುವುದರ ಜೊತೆಗೆ ಈ ಸದನದಲ್ಲಿ ಬಹಳಷ್ಟು ಭಿನ್ನಾಭಿಪ್ರಾಯಗಳು ಬಂದಂಥ ಸಂದರ್ಭದಲ್ಲಿ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಹೀಗೆ ಎಲ್ಲಾ ಹಂತದಲ್ಲೂ ಸಹಿತ ಬಹಳ ಸಂಯಮದಿಂದ ನಡೆದುಕೊಂಡು ಆ ಒಂದು ಸ್ಥಾನದ ಮತ್ತು ಸದನದ ಗೌರವವನ್ನು ಎತ್ತಿಹಿಡಿದಿದ್ದೀರಿ. ಇನ್ನು ಸರ್ಕಾರದ ಕಡೆಯಿಂದ ನಾವು ಹೇಳುವುದೇ ಸರಿ, ನಾವು ಮಾಡುವುದೇ ಸರಿ ಎಂದು ನಾವು ಹೇಳುವುದಿಲ್ಲ. ಅನೇಕ ಸಂದರ್ಭದಲ್ಲಿ ಸರ್ಕಾರದ ಕಡೆಯಿಂದ ನಮ್ಮ ತಪ್ಪುಗಳು ಸಹ ಇರುತ್ತವೆ. ತಮ್ಮ ಮನಸ್ಸು ನೋಯುವ ರೀತಿಯಲ್ಲಿ ನಾವು ಮಂತ್ರಿಗಳು ಅನೇಕ ಸಂದರ್ಭದಲ್ಲಿ ನಡೆದುಕೊಂಡಿರಬಹುದು. ಆ ರೀತಿ ನಿಮ್ಮ ಮನಸ್ಸಿಗೆ ನೋವಾಗಿದ್ದರೆ ಈ ಸಂದರ್ಭದಲ್ಲಿ ನಾನು ವೈಯಕ್ತಿಕವಾಗಿ ನಮ್ಮೆಲ್ಲರ ಪರವಾಗಿ ಕ್ಷಮೆ ಕೇಳಲಿಕ್ಕೆ ಬಯಸುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. 'ನನ್ನ ರಕ್ಷಣೆಗೆ ನೀವು ಮಂತ್ರಿಗಳು ಯಾರೂ ಬರಲಿಲ್ಲ' ಎನ್ನತಕ್ಕಂಥ ಮಾತನ್ನು ತಾವು ಮೊನ್ನೆಯ ದಿವಸ ಹೇಳಿದ್ದೀರಿ. ಯಾರಿಗೂ ಆ ರೀತಿಯ ಉದ್ದೇಶಗಳು, ದುರುದ್ದೇಶ ಇಲ್ಲವೆಂದು ಹೇಳಬಯಸುತ್ತೇನೆ. ತಾವು ಪಕ್ಷದ ಸಂಖ್ಯೆ ಆಧಾರದ ಮೇಲೆ ಯಾವತ್ತೂ ಸಹಿತ ಅಧ್ಯಕ್ಷರಾಗಿ ನಡೆದುಕೊಂಡಿಲ್ಲ. ಯಾವುದೇ ಪಕ್ಷದ ಸದಸ್ಯರು ಇರಲಿ, ಒಬ್ಬರು, ಇಬ್ಬರು ಇರಲಿ, ಅಥವಾ ಅವರ ಕ್ಷೇತ್ರಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಇರಬಹುದು ಅಥವಾ ಸಮಾಜಕ್ಕೆ ಸಂಬಂಧಪಟ್ಟ, ರಾಜ್ಯದ ಹಿತವನ್ನು ಕಾಪಾಡತಕ್ಕಂಥ ಸಂದರ್ಭ ಇರಬಹುದು. ಹೀಗೆ ಎಲ್ಲಾ ಸಂದರ್ಭಗಳಲ್ಲೂ ತಾವು ತಮ್ಮ ಸ್ಥಾನದ ಗೌರವವನ್ನು ಎತ್ತಿಹಿಡಿದಿದ್ದೀರಿ. ಈ ಅಧಿವೇಶನದಲ್ಲಿ ವಿಶೇಷವಾಗಿ ಮಹಿಳೆಯರ ಸಮಸ್ಯೆಗಳಿಗೆ ತಾವು ಹೆಚ್ಚಿನ ಮಹತ್ವವನ್ನು ಕೊಟ್ಟು ಸದನ ಸಮಿತಿಯನ್ನು ಮಾಡಿರುವುದರಿಂದ,